# ಸೆಲೆಬ್ರಿಟಿ

■ ಹನಿ

## ಲೋಕಸಭೆಯತ್ತ ಸೇನ್



ನಟನಾ ಪ್ರತಿಭೆ ಇದ್ದರೂ ತನ್ನ ಸೆಕ್ಸೀ ಇಮೇಜ್ ಸಲುವಾಗಿಯೇ ಚಿತ್ರರಂಗದಲ್ಲಿ ಹೆಚ್ಚು ಸುದ್ದಿಯಾದಾಕೆ ಈ ಮೂನ್ ಮೂನ್ ಸೇನ್. ಹೆಸರಲ್ಲೇ ಎರಡು ಚಂದ್ರರನ್ನು ಇಟ್ಟುಕೊಂಡಿರುವ ಈ ಬಂಗಾಳಿ ಚಂದ್ರಮುಖಿ, ಈಗ 55ರ ಹರೆಯದಲ್ಲಿ ಲೋಕಸಭಾ ಚುನಾವಣೆಗೆ ಸ್ಪರ್ಧಿಯಾಗಿದ್ದು, ಬಾಲಿವುಡ್‌ನಲ್ಲಿ ಹೊಸ ಸಂಚಲನ ಉಂಟಾಗಿದೆ. ಮೊನ್ನೆಯಷ್ಟೇ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ ಪಕ್ಷ ಸೇರಿರುವ ಮೂನ್ ಮೂನ್, ಬಂಕುವಾ ಲೋಕಸಭಾ ಕ್ಷೇತ್ರದಿಂದ ಟಿಎಂಸಿ ಅಭ್ಯರ್ಥಿಯಾಗಿ ಕಣಕ್ಕೆ ಇಳಿದಿದ್ದಾರೆ.

ಕೋಲ್ಕತ್ತಾದಲ್ಲೇ ತುಲನಾತ್ಮಕ ಸಾಹಿತ್ಯದ ಬಗ್ಗೆ ಸ್ನಾತಕೋತ್ತರ ಪದವಿ ಪಡೆದ ಮೂನ್ ಮೂನ್ ಆರಂಭದಲ್ಲಿ ಅಧ್ಯಾಪಕಿಯಾಗಿ ಕೆಲಸ ಮಾಡಿದವರು. ಮಕ್ಕಳಿಗೆ ಡ್ರಾಯಿಂಗ್ ಕಲಿಸಿದ ಮೂನ್‌ಮೂನ್, ಬಳಿಕ ಇಂಗ್ಲಿಷ್ ಟೀಚರ್ ಆಗಿಯೂ ದುಡಿದಿದ್ದಾರೆ. ಮದುವೆಯಾಗಿ ಮಕ್ಕಳಾದ ಬಳಿಕ ಚಿತ್ರರಂಗಕ್ಕೆ ಬಂದ ಮೂನ್‌ಮೂನ್, ಮೊದಲ ಸಿನಿಮಾದಲ್ಲೇ ಸೆಕ್ಸೀ ನಟಿಯಾಗಿ ಬಿಂಬಿತರಾದದ್ದು ವಿಪರ್ಯಾಸ. 84ರಲ್ಲಿ ತೆರೆಗೆ ಬಂದ ಹಿಂದಿ ಸಿನಿಮಾ 'ಅಂದರ್ ಬಾಹರ್' ಈ ಕಾರಣಕ್ಕಾಗಿಯೇ ವಿವಾದವನ್ನೂ ಸೃಷ್ಟಿಸಿತು. 91ರಲ್ಲಿ ಬಂದ '100 ಡೇಸ್' ಎನ್ನುವ ಸಿನಿಮಾದಲ್ಲಿ ಮಾಧುರಿ ದೀಕ್ಷಿತ್‌ಗೇ ಅಭಿನಯ ಪೈಪೋಟಿ ನೀಡಿದ ಮೂನ್‌ಮೂನ್, ಆ ಚಿತ್ರದ ಶತದಿನೋತ್ಸವ ಪ್ರದರ್ಶನಕ್ಕೂ ಕಾರಣರಾದರು. 80ರ ದಶಕದ ಸುಪ್ರಸಿದ್ಧ ಮಾಡೆಲ್ ಆಗಿದ್ದ ಈಕೆ, ಸೋಪ್ ಜಾಹೀರಾತೊಂದರಲ್ಲಿ ನೀಡಿದ 'ಪೋಸ್' ಕೂಡಾ ವಿವಾದ ಸೃಷ್ಟಿಸಿತ್ತು. 'ಕಲಾತ್ಮಕವಾಗಿ ತೋರಿಸುವುದಾದಲ್ಲಿ ನಾನು ಛಾಯಾಗ್ರಾಹಕನ ಎದುರು ಬಟ್ಟೆಯಿಲ್ಲದೇ ನಿಲ್ಲಲೂ ಸಿದ್ಧ' ಎಂಬ ಈಕೆಯ ಹೇಳಿಕೆಯಂತೂ ಬಾಲಿವುಡ್‌ನಲ್ಲಿ ತಿಂಗಳುಗಟ್ಟಳೆ ಚರ್ಚೆಗೆ ಗ್ರಾಸ ಒದಗಿಸಿತ್ತು.

ಬಂಗಾಳಿ, ಹಿಂದಿ, ತೆಲುಗು, ತಮಿಳು, ಕನ್ನಡ, ಮಲಯಾಳಂ, ಮರಾಠಿ– ಹೀಗೆ ಹಲವು ಭಾಷೆಗಳ ಚಿತ್ರಗಳಲ್ಲಿ ಮೂನ್‌ಮೂನ್ ನಟಿಸಿದ್ದಾರೆ. 60 ಸಿನಿಮಾ ಮತ್ತು 40 ಸೀರಿಯಲ್‌ಗಳಲ್ಲಿ ನಟಿಸಿದ ಬಳಿಕ ಮೂನ್‌ಮೂನ್ ಈಗ ರಾಜಕೀಯಕ್ಕೆ ಇಳಿದಿದ್ದಾರೆ. ಯಾರಿಗೆ ಗೊತ್ತು... ಕೇಂದ್ರದಲ್ಲಿ ನಾಳೆ ತೃಣಮೂಲ ಬೆಂಬಲದ ಸರಕಾರ ರಚನೆಯಾದರೆ ಈಕೆ ಸಚಿವೆಯೂ ಆಗಬಹುದು! ಈಕೆಯ ಅಮ್ಮ ಅಪರ್ಣಾ ಸೇನ್ ತನ್ನ ಅದ್ವಿತೀಯ ನಟನೆಯಿಂದ ಸುದ್ದಿ ಮಾಡಿದರೆ, ಮಕ್ಕಳಾದ ರಿಯಾ ಮತ್ತು ರೈಮಾ ಸೇನ್ ಈಕೆಯಂತೆಯೇ ಸೆಕ್ಸೀ ನಟನೆಯನ್ನೇ ಬಂಡವಾಳ ಮಾಡಿಕೊಂಡಿದ್ದಾರೆ. ಮೂನ್‌ಮೂನ್‌ಳಲ್ಲಿ ನಟನಾ ಸಾಮರ್ಥ್ಯ ಇದೆ ಎನ್ನುವುದನ್ನು ಸರಿಯಾಗಿ ಗುರ್ತಿಸಿದವರು ತೆಲುಗು ನಿರ್ದೇಶಕ ಕೆ.ವಿಶ್ವನಾಥ್. ಅವರ 'ಸಿರಿವೆನ್ನಲು' ಸಿನಿಮಾದಲ್ಲಿ ಅಪರೂಪದ ನಟನೆಗಾಗಿ ಮೂನ್‌ಮೂನ್ ಆಂಧ್ರ ಸರಕಾರದ ನಂದಿ ಪ್ರಶಸ್ತಿಯನ್ನೇ ಗೆದ್ದುಕೊಂಡರು. ಈಕೆಯ ಅಜ್ಜ ಆಗರ್ಭ ಶ್ರೀಮಂತ. ಮುತ್ತಜ್ಜ ತ್ರಿಪುರಾ ಮಹಾರಾಜರ ಬಳಿ ದಿವಾನರಾಗಿ ರಾಜ್ಯ ಆಳಿದವರು. ಈಗ ಮರಿಮಗಳು ಕೂಡಾ ರಾಜ್ಯವಾಳಲು ಹೊರಟರೆ ತಪ್ಪು ಎನ್ನಲಾದೀತೆ?

## ಬರೆದದ್ದು ಸಾಕು!



'ಮೇಡಂ, ನೀವು ಕಾದಂಬರಿಗಳನ್ನು ಬರೆದದ್ದು ಸಾಕು. ಬರವಣಿಗೆಗೆ ನೀವು ಸ್ವಲ್ಪ ಕಾಲ ರಜೆ ಹಾಕಿದರೆ ಮಾರ್ಕೆಟ್‌ನಲ್ಲಿ ಬೇರೆ ಲೇಖಕರಿಗೆ ಸ್ವಲ್ಪ ಜಾಗವಾದರೂ ಸಿಗುತ್ತದೆ' ಎಂದು ಬ್ರಿಟನ್ನಿನ ವಿಮರ್ಶಕರು ಜೆ.ಕೆ.ರೌಲಿಂಗ್‌ರಿಗೆ ನೇರವಾಗಿ ಮನವಿ ಮಾಡಿದ್ದಾರೆ! ಜನಪ್ರಿಯತೆಯಲ್ಲಿ ತುತ್ತ ತುದಿಗೇರಿರುವ ಜೆ.ಕೆ.ರೌಲಿಂಗ್, ಸದ್ಯಕ್ಕೆ ಹ್ಯಾರಿ ಪೋಟರ್ ಸೀರಿಯಲ್ ಪುಸ್ತಕಗಳನ್ನು ಬರೆಯುವುದನ್ನು ನಿಲ್ಲಿಸಿದ್ದಾರೆ. ಜಾಗತಿಕ ಮಾರುಕಟ್ಟೆಯಲ್ಲಿ ಮಾರಾಟದ ಹಲವು ದಾಖಲೆಗಳನ್ನು ಮುರಿದಿಕ್ಕಿದ ಹ್ಯಾರಿ ಪೋಟರ್ ಸರಣಿ, ಚಿತ್ರರಂಗದಲ್ಲಿ ಈಗ ದಂತಕಥೆಯೇ ಆಗಿ ಕುಳಿತಿದೆ. ಆ ಸರಣಿಯನ್ನು ಬಿಟ್ಟು ಜೆ.ಕೆ.ರೌಲಿಂಗ್ ಬೇರೆ ರೀತಿಯ ಕಾದಂಬರಿಗಳನ್ನು ಬರೆದರೆ, ಮಾರುಕಟ್ಟೆಯಲ್ಲಿ ಅದೂ ಸೂಪರ್ ಸೇಲ್ ಆಗಿದ್ದು, ಅದಕ್ಕೆಂದೇ ವಿಮರ್ಶಕರು ಈಕೆಯ ಬೆನ್ನು ಹತ್ತಿದ್ದಾರೆ!

ಕಳೆದ ವರ್ಷ 'ಕುಕೂಸ್ ಕಾಲಿಂಗ್' ಕಾದಂಬರಿಯನ್ನು ಈಕೆ ಬರೆದದ್ದು ರಾಬರ್ಟ್ ಗೇಲ್‌ಬ್ರೇಥ್ ಎಂಬ ರಹಸ್ಯ ಹೆಸರಲ್ಲಿ! ಮಾರುಕಟ್ಟೆಯಲ್ಲಿ ಅತ್ಯಧಿಕ ಮಾರಾಟ ಕಂಡ ಈ ಪುಸ್ತಕದ ಲೇಖಕ ಯಾರು ಎಂದು ಹಲವರು ತಲೆ ಕೆಡಿಸಿಕೊಂಡಿದ್ದರು. ಆದರೆ ಯಾರೋ ಗುಟ್ಟು ರಟ್ಟು ಮಾಡಿದರು. ಈ ಗಟ್ಟಿಗಿತ್ತಿ ಅವರ ಮೇಲೆ ಕೇಸ್ ಹಾಕಿ ಸಾವಿರಾರು ಪೌಂಡ್‌ಗಳ ಪರಿಹಾರವನ್ನು ಪಡೆದಳು. ಆ ಪರಿಹಾರವನ್ನು ಬಡವರಿಗೆ ದಾನ ಮಾಡಿದಳು. ಈಗ ರಹಸ್ಯನಾಮ ಎಲ್ಲರಿಗೆ ಗೊತ್ತಾಗಿದ್ದರೂ ಅದೇ ಹೆಸರಲ್ಲಿ 'ದಿ ಸಿಲ್ಕ್ ವರ್ಮ್' ಎಂಬ ಹೊಸ ಕಾದಂಬರಿ ಬರೆದಿದ್ದಾರೆ. ಜೂನ್‌ನಲ್ಲಿ ಅದರ ಬಿಡುಗಡೆಯ ದಿನವನ್ನೇ ಓದುಗರು ಕಾದು ಕುಳಿತಿದ್ದಾರೆ! ವಿಮರ್ಶಕರು ಸಾಕು ಎಂದರೂ, ಓದುಗರು ಕೇಳಬೇಕಲ್ಲ? ■

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65